# ಪ್ರೇಮವೆನಲು ಹಾಸ್ಯವೆ?

ನನಗೂ ಅವಳಿಗೂ
ಗಾಳಿ ಗಂಧ ಸಂಬಂಧ
ಹಾಡುತ್ತೇವೆ ಭೂಮಿಗೀತ
ಕೇಳಬೇಡಿ ಮತ್ತೆ
ಯಾರು ಗಾಳಿ ಗಂಧ ಯಾರು

★

ಅವಳ ಪ್ರೀತಿಯ ಬಾಹುಗಳ
ಅಡಕತ್ತರಿಯಲ್ಲಿ ಸಿಕ್ಕ
ಅಡಕೆ ನಾನು
ಅವಳ ತುಟಿಯ ರಂಗಿಗೆ
ಚೂರಾಗುವುದೂ ಇಷ್ಟ ನನಗೆ

★

ಯಾವ ಕನ್ನಡಿಯೂ
ನಿಜವ ತೋರಿಲ್ಲ ನನಗೆ
ನಿನ್ನ ಕಣ್ಣ ಹೊರತಾಗಿ
ನಿನ್ನ ಪ್ರೀತಿಗಿಂತ ನೀತಿಯಿಲ್ಲ
ಬೇಡ ನನಗೆ ವೇದಾಂತ

ವರಕವಿ ಬೇಂದ್ರೆಯವರ, 'ನಾನು ಬಡವಿ ಆತ ಬಡವ, ಒಲವೇ ನಮ್ಮ ಬದುಕು' ಕನ್ನಡದ ಅತ್ಯುತ್ತಮ ಪ್ರೇಮ ಕವಿತೆಗಳಲ್ಲೊಂದು. ಕವಿತೆಯ ಭಾವವೂ, ಶಬ್ದಶಬ್ದವೂ ಸರಳತೆಯನ್ನು ಸಾರುತ್ತದೆ. ಬಡತನವನ್ನು ಮೀರಿ ನಿಲ್ಲುವ ಆದರ್ಶ ಸಾಂಗತ್ಯದ ಪ್ರೇಮವದು. ಪ್ರೇಮವೆಂದರೆ ಕೊಡು ಕೊಳ್ಳುವ ವ್ಯವಹಾರವಾಗುವ ಎಲ್ಲಾ ಸನ್ನಿವೇಶಗಳಿಗೂ ಮದ್ದಾಗಬಲ್ಲ ಕವಿತೆ ಇದು.

ಪ್ರೇಮಕಾಮದ ಕವಿತೆಗಳು ಕಡಿಮೆಯಾಗಿವೆ ಎನಿಸಿದರೂ, ಬರೆದದ್ದನ್ನಾದರೂ ಗುರುತಿಸಬೇಕಾಗಿದೆ. ಕಾವ್ಯದ ವಸ್ತು ವಿಷಯ ವ್ಯಾಪ್ತಿಯು ಕವಿ ಮತ್ತು ಕಾಲದ ಆಯ್ಕೆಯಾಗಿರುತ್ತದೆ.

ತುಮಕೂರು ಜಿಲ್ಲೆ, ಕುಣಿಗಲ್ ತಾಲೂಕು ಹಂದಲಗೆರೆ ಗ್ರಾಮದ ಈ ಕವಿ, ಪ್ರಸ್ತುತ ಬೆಂಗಳೂರಿನ ವಾಸಿ. ಸಾಹಿತ್ಯ, ರಂಗಭೂಮಿ ಮತ್ತು ಸಿನಿಮಾ ಇವರ ಆಸಕ್ತಿಯ ವಿಷಯಗಳು. ಈವರೆಗೆ 'ನೇಗಿಲ ಗೆರೆ', 'ನೀರ ಮೇಗಲ ಸಹಿ' ಕವನ ಸಂಕಲನಗಳನ್ನು ಮತ್ತು 'ಅರಿವೇ ಅಂಬೇಡ್ಕರ್' ಸಂಪಾದಿತ ಕೃತಿಯನ್ನು ಪ್ರಕಟಿಸಿದ್ದಾರೆ.